





ರಾಮಮಂದಿರ ನಿರ್ಮಾಣಕ್ಕೆ ಅಯೋಧ್ಯೆಯಲ್ಲಿ ಅಧಿಕೃತವಾಗಿ ಅಡಿಗಲ್ಲು ಬಿದ್ದಿದೆ. ಕೋಟಿ ಕೋಟಿ ಹೃದಯಗಳಲ್ಲಿ ರಾಮನಾಮ ಭಾವುಕತೆಯ ಅಲೆಗಳನ್ನು ಎಬ್ಬಿಸಿದೆ.

ರಾಮನೆಂದರೆ ಅರಸನಷ್ಟೇ ಅಲ್ಲ, ದೈವವಷ್ಟೇ ಅಲ್ಲ; ಶ್ರೀಸಾಮಾನ್ಯರ ತವಕತಲ್ಲಣಗಳಿಗೆ ಒದಗಿಬರುವ ರೂಪಕ ಶ್ರೀರಾಮ. ಅಜ್ಜಿ ಶಬರಿಯ ಅವ್ಯಾಜ ಪ್ರೇಮಕ್ಕೆ ಓಗೊಟ್ಟ ರಾಮ, ಅಳಿಲನ್ನು ಭುಜದ ಮೇಲೆ ಕೂರಿಸಿಕೊಂಡ. ಜಟಾಯುವಿನ ಸಂಕಟಕ್ಕೆ ಕಣ್ಣೀರಾದ. ರಾಮ ಅಡಿಯಿಟ್ಟಲ್ಲಿ ಕಲ್ಲು ಮಿಡುಕಿ ಹೆಣ್ಣಾಗುವುದು.

ಸಮಕಾಲೀನ ರಾಜಕಾರಣ ಮೆರೆಸುತ್ತಿರುವ ರಾಮ ಧನುರ್ಧಾರಿ. ಆದರೆ, ವಾಲ್ಮೀಕಿ ಸೃಜಿಸಿದ ರಾಮನಿಗೆ ಬಿಲ್ಲು ಭೂಷಣವಲ್ಲ. ಆ ರಾಮ ಧನುಸ್ಸನ್ನು ಭಂಗಿಸಿದವನು; ನಾರುಡುಗೆಯನ್ನೇ ಆಭರಣವನ್ನಾಗಿಸಿಕೊಂಡವನು.

ರಾಮನ ನಡೆಯಲ್ಲಿ ನುಡಿಯಲ್ಲಿ ಹಾಗೂ ಉಡುಪಿನಲ್ಲಿ ನಮ್ಮ ರಾಜಕಾರಣಿಗಳೊಂದು ಪಾಠವಿದೆ. ಸಾಮ್ರಾಟನಾದರೂ ರಾಮ ಸರಳತೆಯನ್ನು ಮೈಗೂಡಿಸಿಕೊಂಡಿದ್ದ. ಅರಸುತನವೆನ್ನುವುದು ರಾಮನಿಗೆ ಅಂಕುಶವಿಲ್ಲದ ಅಧಿಕಾರವಾಗಿರಲಿಲ್ಲ. ಅದು ಪ್ರಜೆಗಳಿಗೆ ಉತ್ತರದಾಯಿಯಾಗಿತ್ತು. ಆ ಕಾರಣದಿಂದಲೇ ರಾಮ ಜನಸಾಮಾನ್ಯನ ನುಡಿಗಂಜಿದ; ಪತ್ನಿ ಸೀತೆಯನ್ನೇ ಪರಿತ್ಯಾಗ ಮಾಡಿದ.

ರಾಮರಾಜ್ಯ ಎನ್ನುತ್ತೇವೆ. ಅದಿರುವುದಾದರೂ ಎಲ್ಲಿ? ಆ ಆದರ್ಶ ರಾಜ್ಯದ ಕನಸನ್ನು ಗಾಂಧೀಜಿ ಕಂಡಿದ್ದರು. ಸ್ವಾವಲಂಬಿ ಗ್ರಾಮಗಳ, ಶ್ರಮ ಶಕ್ತಿಯನ್ನು ನೆಚ್ಚಿದ, ಸ್ತ್ರೀ ಸಂವೇದನೆ ಪ್ರಧಾನವಾದ, ಪ್ರತಿನಿಧಿಗಳು ಪ್ರಜೆಗಳ ಸೇವಕರಾದ ವ್ಯವಸ್ಥೆಯೇ ರಾಮರಾಜ್ಯ. ವೈರುಧ್ಯ ನೋಡಿ: ರಾಮರಾಜ್ಯದ ಮಾತನಾಡುವವರು ಕಟ್ಟಿಕೊಡುತ್ತಿರುವ ಸಂಕಥನಗಳಲ್ಲಿ ಸಾಮಾಜಿಕ ನ್ಯಾಯದ ಒಳಗೊಳ್ಳುವಿಕೆಯಿಲ್ಲ, ಅಳಿಲಿಗೆ ಜಾಗವಿಲ್ಲ, ಶಬರಿಯ ನೆನಪಿಲ್ಲ, ಶ್ರೀಸಾಮಾನ್ಯನಿಗೆ ಕಿಮ್ಮತ್ತಿಲ್ಲ.

ಜನಸಾಮಾನ್ಯರ ಮನಸ್ಸಿನಲ್ಲಿ ರಾಮ ಜೀವನಮೌಲ್ಯಗಳ ರೂಪದಲ್ಲಿ ಅಚ್ಚೊತ್ತಿದ್ದಾನೆ. ಈ ರಾಮ ಕಾವ್ಯ, ನಾಟಕ, ಸಂಗೀತ, ಚಿತ್ರಕಲೆ, ಯಕ್ಷಗಾನ, ತೊಗಲು ಗೊಂಬೆಯಾಟ, ಹೀಗೆ ಅನೇಕ ಪ್ರಕಾರಗಳ ಮೂಲಕವೂ ನಮ್ಮ ಸ್ಮೃತಿಯಲ್ಲಿದ್ದಾನೆ, ಬದುಕಿನಲ್ಲಿದ್ದಾನೆ. ಹಲವು ರೂಪಗಳಲ್ಲಿ ಜನಮಾನಸದಲ್ಲಿ ಅಚ್ಚೊತ್ತಿರುವ ರಾಮ ಅಂಚೆಚೀಟಿಗಳಲ್ಲೂ ಒಡಮೂಡಿದ್ದಾನೆ. ಭಾರತ ಮಾತ್ರವಲ್ಲದೆ ನೇಪಾಳ, ಥಾಯ್ಲೆಂಡ್, ಕಾಂಬೋಡಿಯಾ, ಇಂಡೋನೇಷ್ಯಾ, ಶ್ರೀಲಂಕಾ ಸೇರಿದಂತೆ ವಿಶ್ವದ ನೂರಕ್ಕೂ ಹೆಚ್ಚು ದೇಶಗಳು ರಾಮ ಮತ್ತು ರಾಮಾಯಣ ಚಿತ್ರಣದ ಅಂಚೆಚೀಟಿಗಳನ್ನು ಪ್ರಕಟಿಸಿವೆ. ಆ ಮೂಲಕ ರಾಮ ವಿಶ್ವಮಾನ್ಯನಾಗಿದ್ದಾನೆ. ಬೆಂಗಳೂರಿನ ಹಿರಿಯ ಅಂಚೆಚೀಟಿ ಸಂಗ್ರಹಗಾರ್ತಿ ಎನ್. ಶ್ರೀದೇವಿ, ರಾಮಾಯಣದ ಕುರಿತು ವಿವಿಧ ದೇಶಗಳು ತಂದಿರುವ ಅಂಚೆಚೀಟಿಗಳನ್ನು ಸಂಗ್ರಹಿಸಿದ್ದಾರೆ; ಪ್ರದರ್ಶಿಸಿದ್ದಾರೆ; ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೂ ಪಾತ್ರರಾಗಿದ್ದಾರೆ.

ಅಯೋಧ್ಯೆಯಲ್ಲಿನ ಮಂದಿರ ನಿರ್ಮಾಣ ಪ್ರಕ್ರಿಯೆ ಆರಂಭಗೊಳ್ಳುವ ಮೂಲಕ, ರಾಮನ ಮೂರ್ತಿಗೊಂದು ಭವ್ಯ ನೆಲೆ ದೊರೆಯುತ್ತಿದೆ. ರಾಮನ ಆದರ್ಶಗಳನ್ನು ಸಾಕಾರಗೊಳಿಸುವ ಬಗ್ಗೆ ಯೋಚಿಸಲಿದು ಸಕಾಲ.




